**ದಿನಾಂಕಃ 02.02.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು – 1ನೇ ಪ್ರತಿವಾದಿ ಪರ ವಕೀಲರಿಂದ**

ಕ್ರಯದ ಕರಾರು ಪತ್ರ ಮಾಡುವ ಸಮಯದಲ್ಲಿ ಮಾಲೀಕರಿಗೆ ಸೇರಿದ ಕ್ರಯ ಪತ್ರ ಮತ್ತು ಪಹಣಿಯನ್ನು ನೋಡಿರುತ್ತೇನೆ. ವಾದಿಯವರು ನನ್ನ ಬಳಿ ಬಂದಾಗ ಮಾಲೀಕತ್ವಕ್ಕೆ ಸಂಬಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ಪರಿಶೀಲಿಸಿದ್ದೇನೆ ಎಂದು ಹೇಳಿದ ಕಾರಣ ನಾನು ಬರೀ ಕ್ರಯ ಪತ್ರ ಮತ್ತು ಪಹಣಿಯನ್ನು ನೋಡಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೇನೆ. ಅವುಗಳನ್ನು ಹೊರತು ಪಡಿಸಿ ಬೇರೆ ದಾಖಲೆಗಳನ್ನು ನೋಡಿರುವುದಿಲ್ಲ. ಕ್ರಯದ ಕರಾರು ಪತ್ರ ಮಾಡುವ ಪೂರ್ವದಲ್ಲೇ ನನಗೆ ವಾದಿ ಮತ್ತು ಪ್ರತಿವಾದಿಗಳು ಪರಿಚಯವಿದ್ದರು. ವಾದಿಯವರ ಕೇಸು ನನ್ನ ಬಳಿ ಇದ್ದ ಕಾರಣ ನನಗೆ ಪರಿಚಯವಿರುತ್ತಾರೆ ಪ್ರತಿವಾದಿಗಳು ಹಲವಾರು ಬಾರಿ ಲೀಗಲ್ ಓಪಿನಿಯನ್‌ಗೆ ಬರುತ್ತಿದ್ದ ಕಾರಣ ನನಗೆ ಪರಿಚಯವಿರುತ್ತಾರೆ. ಸಾಕ್ಷಿಯು ನನಗೆ ವಾದಿ ಮತ್ತು ಪ್ರತಿವಾದಿಗಳ ಗುರುತಿನ ಚೀಟಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ಕ್ರಯದ ಕರಾರು ಪತ್ರದಲ್ಲಿ ಆಧಾರ್ ಕಾರ್ಡಿನ ನಂಬರು ಹಾಕಿರುವುದಿಲ್ಲ ಎಂದರೆ ಸರಿ. ನಿಪಿ–1ರ ಪುಟ 4ರ 5ನೇ ಪ್ಯಾರಾದಲ್ಲಿ from the date of agreement ಎಂಬುದು ಸೇರಿಸಿದ್ದು ನನ್ನ ಹಸ್ತಾಕ್ಷರದಲ್ಲಿರುವುದಿಲ್ಲ. ಪುಟ 5 ರ ಮೊದಲ ಪ್ಯಾರಾದಲ್ಲಿ Five hundred ಎಂದು ಬರೆದಿರುವುದು ನನ್ನ ಹಸ್ತಾಕ್ಷರದಲ್ಲಿರುವುದಿಲ್ಲ. ಅದರ ಎರಡು ಬರವಣಿಗೆ ನಾನು ಮಾಡಿರುವುದಿಲ್ಲ. ನಿಪಿ–1ಕ್ಕೆ ನಾನು ಸಹಿ ಮಾಡುವಾಗ ಸದರಿ ಎರಡು insertion ಇದ್ದಿರುವುದಿಲ್ಲ. ಹಣದ ವ್ಯವಹಾರ ನನ್ನ ಸಮಕ್ಷಮ ಆಗಿರುವುದಿಲ್ಲ ಅವರ ಹೇಳಿಕೆಯ ಮೇಲೆ ರೂ. ಮೂರೂವರೆ ಲಕ್ಷ ಡಿಡಿ ಮೂಲಕ ಮತ್ತು ರೂ. ಮೂರೂವರೆ ಲಕ್ಷ ಚೆಕ್ಕಿನ ಮೂಲಕ ವಾದಿಗೆ ಕೊಟ್ಟಿರುವ ಬಗ್ಗೆ ಬರೆದಿರುತ್ತೇನೆ. ವಾದಿ ಪ್ರತಿವಾದಿಗಳೇ ಸಾಕ್ಷಿದಾರರನ್ನು ಕರೆದುಕೊಂಡು ಬಂದಿರುವ ಕಾರಣ ನಾನು ಅವರ ಗುರುತಿನ ಚೀಟಿಗಳನ್ನು ಪಡೆದುಕೊಂಡಿರುವುದಿಲ್ಲ. ವಾದಿಯ ಕೇಸು ನನ್ನ ಬಳಿ ಇದ್ದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಅವೆರಡು insertion ಗಳನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.